ಮೈಸೂರ ಗೆಜೆಟ

ಸರ್ಕಾರದಿಂದ ಪಾಯಿಷ್ ಆದ್ದು.

ಬೆಂಗಳೂರು, ಶನಿವಾರ, ಜನವರಿ ತಾ|| 12, ಸ್ಯ 1889.

ಸೂ॥ ಈ ಭಾಗವನ್ನು ಪ್ರತ್ಯೇಕ ಕೇರಿಸಿ ಇಡುವ ಬ್ಯೆ ಇದಕ್ಕೆ ದೇರೆಯಾಗಿ ಪುಟ ಸಂಖ್ಯೆ ಕೊಡಲ್ಪಡುತ್ತೆ.

೨ನೇ ಭಾಗ.

ಇಂಡ್ಯಗವರ್ನ್‌ಮೆಂಟ್, ರೆಸಿಡೆಂಟರು, ಚೀಫ್ ಜಡ್ಜೀರು, ವಗ್ಯೆರೇರಿಂದ ಕೊಟ್ಟೋಣಾದ ಇಸ್ತಿಹಾರ್ ನಾಮೆಗಳು.

ಇನಾಂ ಇಲಾಖಾ.

ಇಸ್ತಿಹಾರ್ ನಾಮೆ.

ನಂಬರ್ 2. ತಾರೀಖು 14ನೇ ಡಿಕಂಬರ್ 1888.

ಇನಾಂದಾರ್ರಿಗೆ ಇದರಿಂದ ತಿಳಿಯಪಡಿಸುವದೇನಂದರೆ, ಪಾವಗಡ ತಾಲ್ಲೂಕಿನಲ್ಲಿ ಯಿರತಕ್ಕ ಚಿಲ್ಲರೆ ಇನಾಂಗಳ ಬಾಬತು (554) ಫೈನಲ್ ಟೈಟಲ್ ಡೀಡ್‌ಯಾನೆ ಕಾಯಂ ಪಟ್ಟೆಗಳು ತುಮಕೂರು ಡಿಸ್ಟ್ರಿಕ್ಟ್ ಡೆಪ್ಯುಟಿ ಕಮ್ಮಿಷನರವರಿಗೆ ಬಟವಾಡೆ ಬ್ಯೆಗೆ ಈ ತಾರೀಖಿನಲ್ಲಿ ಕಳುಹಿಸಲ್ಪಟ್ಟವು.

2. ಸದರೀ ತಾಲ್ಲೂಕಿನ ಅಮಲ್‌ದಾರ್ರಿಂದ ಪ್ರತ್ಯೇಕ ಪ್ರತ್ಯೇಕ ನೋಟಿಸ್ ಬಂದ ಮೇಲೆ ಅವುಗಳನ್ನು ತೆಗದುಕೊಳ್ಳುವ ಬ್ಯೆ ಸದರೀ ಇನಾಂದಾರರು ಐರ್ಜ ಪ್ರಕಾರ ಹಾಜರಾಗತಕ್ಕದ್ದು. ಸದರಿತಾಲ್ಲೂಕಿನ ಅಮಲ್‌ದಾರ್ರು ಅಂಥಾ ನೋಟಿಸುಗಳನ್ನು ದೇರ್‌ಮಾಡದೆ ಕೊಡತಕ್ಕದ್ದೆಂದು ಇದರಿಂದ ನಿಯಮಿಸಲ್ಪಟ್ಟಿವ್ವು ಯಿರುತ್ತಾರೆ.

3. ಸದರೀ ಚಿಲ್ಲರೆ ಇನಾಂಗಳ ಬಗ್ಯೆ ಈ ಆಫೀಸ್ 23ನೇ ನಂಬರ್ 1882ನೇ ಇಸವಿ ಜನವರಿ 17ನೇ ತಾರೀಖಿನ ಇಸ್ತಿಹಾರ್ ನಾಮೆ ಪ್ರಕಾರ ಕೊಡಲ್ಪಟ್ಟ ಪಟ್ಟೆಗಳು ರದ್ದುಮಾಡಲ್ಪಟ್ಟು ಯಿರುತ್ತೆಂದು ಇದರ ದೆಕೆಯಿಂದ ಪ್ರಕಟಿಸಲ್ಪಟ್ಟು ಯಿರುತ್ತೆ.

ಜೆ. ಪಿ. ಗ್ರಾಂಟ್,
ಇನಾಂ ಸೂಪರಿಂಟೆಂಡೆಂಟ್.

ಫಾರೆಸ್ಟ್ ಇಲಾಖಾ.

ತಾರೀಖು 7ನೇ ಜನವರಿ 1889ನೇ ಇಸವಿ.

ಸ್ಯ 1878ನೇ ಇಸವಿ ಫಾರೆಸ್ಟ್ಸ್ ರೂಲ್ಸಿನ 2ನೇ ಅಧ್ಯಾಯದ 9ನೇ ಸೆಕ್ಷನ್ ಅನುಸರಿಸಿ ಈ ಕೆಳಗೆ ನಮೂದಿಸಿ ಯಿರುವ ಗಡಿ ನಿಷ್ಕರ್ಷೆ ಮಾಡಲ್ಪಟ್ಟ ಹಾಸನ ಡಿಸ್ಟ್ರಿಕ್ಟ್ ಸ್ಪೇಟ್ ಫಾರೆಸ್ಟ್ ಯಾನೆ ಮನ್ನಾ ಜಂಗ್ಲಿ ಮತ್ತು ಪ್ಲಾಂಟೇಷ್ನಗಳ ಗಡಿಗಳು ಇದರಿಂದ ಸಕಲಜನಗಳ ತಿಳುವಳಿಕೆ ಬ್ಯೆಗೆ ಫಾಯಿಷ್ ಮಾಡಲ್ಪಟ್ಟು ಯಿರುತ್ತವೆ.

ಆರಕಲ್‌ಗೂಡು ತಾಲ್ಲೂಕು ವಿಜಾಪುರದ ಸ್ಪೇಟ್ ಫಾರೆಸ್ಟ್ಸಿಗೆ.

ನಿಬಂಧನೆಯಾಗಿರುವ ಒಂದು ಗಂಟರ್ಸ್ ಛೇನ್ ಯಾ ಸಂಕಲಿ ಪ್ರಮಾಣ ಅಂದರೆ 22 ಗಜ ರುಂದಿವುಳ್ಳ ಡಿಮಾರ್ಕ್ಕೇಷನ್ ಲೈನಿನ ಹದ್ದುಯೇರ್ಪಡಿಸಿರುವದು ಪ್ಯಾಗಂದರೆ—ಆರಕಲ್‌ಗೂಡು ಕೊಡ್ಲಿಪೇಟೇ ರಸ್ತೆಯ ನಾಲ್ಕನೆ ಮೈಲಿಯ 1ನೇ ಫರ್ಲಾಜಿನಲ್ಲಿ ಸದರಿ ಲೈನ್ ಪ್ರಾರಂಭವಾಗಿ ಅಲ್ಲಿಂದ ದಕ್ಷಿಣ ಅಲ್ಲಿಂದ ಪೂರ್ವ ಅಲ್ಲಿಂದ ಆಗ್ನೇಯ ಅಲ್ಲಿಂದ ಪೂರ್ವ ಹೀಗೆ ತಿರುಗಿ ನಂತರ ದಕ್ಷಿಣಕ್ಕೆ ವಿಜಾಪುರದ ಗ್ರಾಮದ ಗಡಿಯಲ್ಲಿ ಗುಂಡಕಟ್ಟೆ ಹಡ್ಲೂ ಹಾಸಗಲ್ಲು ಮತ್ತು ಹೇಗಿನ ಮರಟು ಯಿವುಗಳ ಮೇಲೆ ಹೊರಟು ವಿಜಾಪುರ ಮತ್ತು ಪಟ್ಟೆಕೆರೆ ಗ್ರಾಮಗಳ ಯಲ್ಲೆ ಕೇರುವಳಿಕೆ ನೈರಿತ್ಯವಾಗಿ ತಿರಗಿ ಕಲ್ಲೂರಿಂದ ಪೈರೋಡಿಗೆ ಹೋಗಿ ಕೇರುವ ಕಾಲ್‌ದಾರ್‌ಮೇಲೆ ಹೊರಟು ಕಲ್ಲೂರು ಮತ್ತು ಕೊಳವಂಗಿ ಗ್ರಾಮಗಳ ಸರ್ವೇ ಬಾಂದು ಗುರ್ತುಗಳನ್ನ ಮುಟ್ಟಿ ಸ್ವಲ್ಪದೂರ ನೈರಿತ್ಯ ದಿಕ್ಕಿನಲ್ಲಿಯೇ ಹೋಗಿ ನಂತರ ಕೊಳ್ಳಂಗೀ ಗ್ರಾಮದಯಲ್ಲೇ ಪಕ್ಕದಲ್ಲಿ ದಕ್ಷಿಣ ದಿಕ್ಕಿಗೆ ತಿರಗಿ ಪುನಃ ಪಟ್ಟಮಕ್ಕೆ ತಿರಗಿ ಅದೇ ದಿಕ್ಕಿನಲ್ಲಿಯೆ ಕೊಳವಂಗೀ ಮತ್ತು ಮುಸವತ್ತೂರ್ ಗ್ರಾಮಗಳಯಲ್ಲೆ ಕೇರುವ ಸರಹದ್ದುವರಿಗೂ ಹೋಗಿ ಮುಸವತ್ತೂರು ಮತ್ತು ಬಬ್ಬಗಳಲೀ ಗ್ರಾಮಗಳ ಯಲ್ಲೆ ಕಟ್ಟನಲ್ಲಿಯೇ ವಾಯವ್ಯ ದಿಕಿನಲ್ಲಿ ಹೊರಟ್ಟು, ಬಬ್ಬುಗಳಲೀ ಮತ್ತು ಕೊಂಗಳಲೀ ಸರಹದ್ದುಗಳು ಕೇರುವ ಕಡೆಯಿಂದ ಪೂರ್ವಕ್ಕೆ ತಿರಗಿ ಕೊಂಗಳಲೀ ಗ್ರಾಮವ ಯಲ್ಲೆ ಪಕ್ಕದಲ್ಲಿ ವೃತ್ತರವಾಗಿ ಹೊರಟು ನಾಲ್ಕನೆ ಮೈಲಿಯೊಳಗೆ ಫರ್ಲಾಂಗ್ ಬಳಿ ರಸ್ತೆಗೆ ಕೇರುತ್ತೆ, ಅದರ ಆಚೆಗೆ ಆರನೇ ಫರ್ಲಾಂಗವರಿಗೂ ರಸ್ತೆ ಅನುಸರಿಸಿ ಚಿಕ್ಕ ಆರಕಲ್‌ಗೂಡು ಮತ್ತು ಕೊಂಗಳಲೀ ಯೆಲ್ಲೆಗಳು ಕೇರುವ ಸ್ಥಳದವರಿಗೂ ವೃತ್ತರದಿಕ್ಕಿನಲ್ಲಿಯೇ ಹೋಗುತ್ತೆ ಅನಂತರ ಆಗ್ನೇಯದಿಕ್ಕಿನಲ್ಲಿ ತಿರಗಿ, ವಿಜಾಪುರದ ರವಿನ್ಯೂ ಸರ್ವೇ ಬಾಂದುಗಳು ಕೇರಿಯಿರುವ ಸ್ಥಳವನ್ನು ಮುಟ್ಟಿ ದಕ್ಷಿಣವಾಗಿ ಹೊರಟ್ಟು ರಸ್ತೆಯಲ್ಲಿ ಕೇರಿ ಅದರ ಆಚೆಗೆ ಮೇಲೆ ನಮೂದಾದ ನಾಲ್ಕನೆ ಮೈಲಿ ವಂದನೇ ಫರ್ಲಾವೆನವರಿಗೂ ರಸ್ತೆಯೇ ಸರಹದ್ದುವುಳ್ಳದ್ದಾಗಿ ಯಿರುತ್ತೆ.